LAC No.158/2022
C/w 165/2022

<u>ಸಾಕ್ಷಿಗೆ ಕರೆಯಿಸಿ ದಿಃ 06.04.2026 ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿ. ಶ್ರೀ.ಎಸ್. ಐ. ವಕೀಲರಿಂದ</u>

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸರಿ ಇದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ.

1) ಪ್ರೊಟೇಷ್ಟ ಪೇಟಿಶನ ಕಾಪಿಯನ್ನು ನಿ.ಪಿ.1 ಎಂದು ಗುರುತಿಸಲಾಯಿತು.
2) ಅವಾರ್ಡ ನೋಟಿಸನ್ನು ಹಾಜರಪಡಿಸಿದ್ದು ನಿ.ಪಿ.2 ಎಂದು ಗುರುತಿಸಲಾಯಿತು.
3) ಅವಾರ್ಡ ಕಾಪಿ ಹಾಜರಪಡಿಸಿದ್ದು ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು.
4) ಎಲ್.ಎ.ಸಿ ನಂಬರ 165/2022 ರ ಪ್ರೊಟೇಷ್ಟ ಪೇಟಿಶನ ಕಾಪಿಯನ್ನು ನಿ.ಪಿ.4 ಎಂದು ಗುರುತಿಸಲಾಯಿತು.
5) ಎಲ್.ಎ.ಸಿ ನಂಬರ 165/2022 ರ ಅವಾರ್ಡ ನೋಟಿಸನ್ನು ಹಾಜರಪಡಿಸಿದ್ದು ನಿ.ಪಿ.5 ಎಂದು ಗುರುತಿಸಲಾಯಿತು.
6) ರಾಯಗೇರಾ ಗ್ರಾಮದ ಸರ್ವೆ ನಂ. 8/1 ರ 2015-16 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿ.ಪಿ.6 ಎಂದು ಗುರುತಿಸಲಾಯಿತು.
7) ರಾಯಗೇರಾ ಗ್ರಾಮದ ಸರ್ವೆ ನಂ. 8/1 ರ 2019-20 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿ.ಪಿ.7 ಎಂದು ಗುರುತಿಸಲಾಯಿತು.
8) ರಾಯಗೇರಾ ಗ್ರಾಮದ ಸರ್ವೆ ನಂ. 8/1/2 ರ 2025-26 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು.
9) ರಾಯಗೇರಾ ಗ್ರಾಮದ ಸರ್ವೆ ನಂ. 8/2 ರ 2015-16 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿ.ಪಿ.9 ಎಂದು ಗುರುತಿಸಲಾಯಿತು.

10) ರಾಯಗೇರಾ ಗ್ರಾಮದ ಸರ್ವೆ ನಂ. 8/2 ರ 2019-20 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿ.ಪಿ.10 ಎಂದು ಗುರುತಿಸಲಾಯಿತು.

11) ರಾಯಗೇರಾ ಗ್ರಾಮದ ಸರ್ವೆ ನಂ. 8/2 ರ 2025-26 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿ.ಪಿ.11 ಎಂದು ಗುರುತಿಸಲಾಯಿತು.

12) ಯಾದಗಿರಿ ಜಿಲ್ಲಾ ನ್ಯಾಯಾಲಯದ ಎಲ್.ಎ.ಸಿ. ನಂ.57/2018 ಪ್ರಕರಣದ ತೀರ್ಪು ಮತ್ತು ಅವಾರ್ಡನ ದೃಢೀಕೃತ ನಕಲು ಹಾಜರಪಡಿಸಿದ್ದು ಅವುಗಳನ್ನು ನಿ.ಪಿ.12 ಮತ್ತು 13 ಎಂದು ಗುರುತಿಸಲಾಯಿತು.

13) ಇಳುವರಿ ಪ್ರಮಾಣ ಪತ್ರವನ್ನು ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿ.ಪಿ.14 ಎಂದು ಗುರುತಿಸಲಾಯಿತು.

14) ಸುರಪುರ ಕೃಷಿ ಉತ್ಪನ ಮಾರುಕಟ್ಟೆಯ ದರ ಪಟ್ಟಿಯ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿ.ಪಿ.15 ಎಂದು ಗುರುತಿಸಲಾಯಿತು.

15) ರಾಯಚೂರು ಕೃಷಿ ವಿಶ್ವವಿದ್ಯಾಲಯದ ಇಳುವರಿ ಪ್ರಮಾಣ ಪತ್ರ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿ.ಪಿ.16 ಎಂದು ಗುರುತಿಸಲಾಯಿತು.

## ಪಾಟೀ ಸವಾಲು 1 ನೇ ಎದುರುದಾರರ ಪರವಾಗಿ ಶ್ರೀ. ಎಮ್. ಎಸ್. ಪಾಟೀಲ ವಕೀಲರಿಂದ

1. ಭೂ-ಸ್ವಾಧೀನ ಆದ ನನ್ನ ಜಮೀನಿನ ಸರ್ವೆ ನಂ. 8/1 ಅದರಲ್ಲಿ 11 ಗುಂಟೆ, ಸರ್ವೆ ನಂ.8/2 ಅದರಲ್ಲಿ 18 ಗುಂಟೆ ಜಮೀನು ಕಾಲುವೆಗಾಗಿ ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಸರಕಾರದವರು ಕಡಿಮೆ ಪರಿಹಾರ ಧನವನ್ನು ಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನು ಕಪ್ಪು ಮಣ್ಣಿನಿಂದ ಕುಡಿದ ಫಲವತ್ತಾತ ಜಮೀನು ಆಗಿರುತ್ತದೆ ಮತ್ತು ನೀರಾವರಿಗೆ ಒಳಪಟ್ಟಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರಕಾರದವರು ಎಲ್ಲವನ್ನು ಪರಿಗಣಿಸಿ ಸೂಕ್ತವಾದ ಪರಿಹಾರ

ಧನವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಬೆಳೆಯುತ್ತಿದ್ದಂತಹ ಎಲ್ಲ ಬೆಳೆಗಳನ್ನು ಬೆಳೆಯುತ್ತಿದ್ದ ಪರಿಗಣಿಸಿ ದಾಖಲೆಗಳನ್ನು ಪರೀಶಿಲಿಸಿ ಸೂಕ್ತವಾದ ಪರಿಹಾರ ಧನವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜಮೀನು 11 ಗುಂಟೆ ಮತ್ತು 18 ಗುಂಟೆ ಸ್ವಾಧೀನವಾಗಿರುತ್ತದೆ. ನನ್ನ ಎಲ್ಲ ದಾಖಲೆಗಳನ್ನು ಹಚ್ಚಿ ರೂ. 20 ಲಕ್ಷ ಪರಿಹಾರ ಧನವನ್ನು ಕೇಳಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರಕಾರದವರು ಎಲ್ಲ ದಾಖಲೆಗಳನ್ನು ಪರಿಗಣಿಸಿ ಸೂಕ್ತವಾದ ಪರಿಹಾರ ಧನವನ್ನು ಮತ್ತು ಸೌಲಭ್ಯವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮಾನ್ಯ ನ್ಯಾಯಾಲಯದ ತೀರ್ಪು ಮತ್ತು ಅವಾರ್ಡ ಮತ್ತು ಇನ್ನಿತರ ದಾಖಲೆಗಳನ್ನು ಸಲ್ಲಿಸಿ ರೂ.20 ಲಕ್ಷ ರೂ ಪರಿಹಾರ ಕೇಳುತ್ತಿರುವುದು ಸೂಕ್ತವಲ್ಲ ಎಂದರೆ ಸರಿಯಲ್ಲ. ಪರಿಹಾರ ಕೊಟ್ಟಿರುವುದರಿಂದ ನಮ್ಮ ಜಮೀನಿಗೆ ನಷ್ಟ ಆಗಿರುವುದಿಲ್ಲ ಮತ್ತು ಸೂಕ್ತವಾಗಿದೆ ಎಂದರೆ ಸರಿಯಲ್ಲ.

2. ನಿ.ಪಿ.3 ನೋಡಿದ್ದು ಅದು ಐ-ತೀರ್ಪು ಇದ್ದು, ಅದರಲ್ಲಿನ ಬೆಲೆ ನಿಗದಿಪಡಿಸಲಾಗಿದೆ ಪುಟ ಸಂಖ್ಯೆ: 21 ರ ಪ್ಯಾರಾ ನಂ.11 ರಲ್ಲಿರುವಂತೆ ಐ-ತೀರ್ಪು ನೀಡಿ ಪರಿಹಾರ ನೀಡಿದ್ದು ಇರುತ್ತದೆ. ಸದರಿ ಪ್ಯಾರಾ ನಂ.11 ನ್ನು **ನಿ.ಆರ್.1** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು 2 ನೇ ಎದುರುದಾರ ಪರವಾಗಿ ಡಿ.ಜಿ.ಪಿ. ರವರಿಂದ</u>

- 1 ನೇ ಎದುರುದಾರರು ಮಾಡಿರುವ ಪಾಟೀ ಸವಾಲನ್ನು 2 ನೇ ಎದುರುದಾರರು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿ ನೀಡಲಾಯಿತು.

<u>ಪಾಟೀ ಸವಾಲು 3 ನೇ ಎದುರುದಾರ ಪರವಾಗಿ ಶ್ರೀ. ಎಸ್.ಎನ್. ರವರಿಂದ</u>

- ಗೈರು ಹಾಜರು ಇದ್ದು ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ- ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.